# ಕರಾವಳಿಯ ಚೀತಾ ನಟನೆಯ ಓಟ

ಪಾಲಿಗೆ ಬಂದ ಪಾತ್ರಕ್ಕೆ ತನ್ನ ಪ್ರತಿಭೆಯನ್ನೆಲ್ಲ ಧಾರೆಯೆರೆಯಬೇಕು ಎಂಬ ನಿಲುವಿನ **ಅದ್ವಿತಿ ಶೆಟ್ಟಿ** ಕೈಯಲ್ಲಿ ಈಗ ಸಾಕಷ್ಟು ಅವಕಾಶಗಳಿವೆ.



ವಿಶ್ವವಿದ್ಯಾಲಯದ ಪಂದ್ಯಾವಳಿಯಲ್ಲಿ ಆ ಹುಡುಗಿ ರಿಲೇ ಟ್ರ್ಯಾಕ್‌ನಲ್ಲಿ ಶರವೇಗದಲ್ಲಿ ಓಡುತ್ತಿದ್ದರೆ ಗ್ಯಾಲರಿಯಲ್ಲಿ ಕೂತ ಹುಡುಗರೆಲ್ಲ 'ಚೀತಾ ಚೀತಾ' ಎಂದು ಚೀರುತ್ತಿದ್ದರು. ವಾರ್ಷಿಕೋತ್ಸವದ ದಿನ ವೇದಿಕೆಯ ಮೇಲೆ ಮೈಯನ್ನು ರಬ್ಬರಿನ ತುಂಡೇನೋ ಎಂಬಂತೆ ಬಾಗಿ ಬಳಕಿಸುತ್ತ ನರ್ತಿಸುತ್ತಿದ್ದರೆ ಅದೇ ಹುಡುಗರು ಹಾಕುವ ಶಿಳ್ಳೆ ಮುಗಿಲು ಮುಟ್ಟುತ್ತಿತ್ತು.

ಅದ್ವಿತಿ ಶೆಟ್ಟಿ ಅನ್ನುವ ಆ ಹುಡುಗಿ ಇಂದು ಚಂದನವನದ ಬಣ್ಣದ ಟ್ರ್ಯಾಕಿನಲ್ಲಿ ಓಡುತ್ತಿದ್ದಾರೆ. ಅವರ ನಟನೆಯಲ್ಲಿ ನರ್ತನದ ಲಾಸ್ಯಕಂಡ ಹರೆಯದ ಹುಡುಗರು ಶಿಳ್ಳೆ ಹಾಕುವುದನ್ನೂ ಮರೆತು ತೆರೆಯ ಮೇಲೆ ನೋಡುತ್ತಾರೆ.

ತಾನು ನಟಿಯಾಗಬೇಕು ಎಂಬ ಕನಸನ್ನೇನೂ ಅದ್ವಿತಿ ಕಂಡವರಲ್ಲ. ಮಂಗಳೂರಿನ ಈ ಹುಡುಗಿ ಎಂಬಿಎ ಮುಗಿಸಿ ವೃತ್ತಿನಿಮಿತ್ತ ಬೆಂಗಳೂರಿಗೆ ಬಂದಾಗಲೂ ಅವರಿಗೆ ತೆರೆಯ ಮೇಲೆ ಮಿಂಚುವ ಆಸೆ –ಆಸಕ್ತಿ ಇನಿತೂ ಇರಲಿಲ್ಲ. ಆಗೀಗ ಟೈಮ್ ಪಾಸ್‌ಗಾಗಿ ಸಿನಿಮಾ ನೋಡುತ್ತಿದ್ದರಾದರೂ ಅದು ಕ್ರೇಜ್ ಆಗಿರಲಿಲ್ಲ. ಹೀಗಿದ್ದ ಅದ್ವಿತಿ ಬದುಕಿಗೆ ತಿರುವು ಕೊಟ್ಟಿದ್ದು 'ಮಿಸ್ಟರ್ ಆ್ಯಂಡ್ ಮಿಸೆಸ್ ರಾಮಾಚಾರಿ' ಸಿನಿಮಾ. ಸ್ನೇಹಿತರ ಒತ್ತಾಯಕ್ಕೆ ಕಟ್ಟುಬಿದ್ದು ಆ ಸಿನಿಮಾದಲ್ಲಿ ತಮ್ಮ ಅವಳಿ ಸಹೋದರಿ ಅಶ್ವಿತಿ ಜೊತೆಗೆ ನಟಿಸಿದರು. ಅಲ್ಲಿಂದ ಅವರ ಆಸಕ್ತಿಯ ಕ್ಷೇತ್ರವೇ ಸಿನಿಮಾ ಆಯಿತು. ನಂತರ 'ಸುಳಿ' ಎಂಬ ಸಿನಿಮಾದಲ್ಲಿಯೂ ಅವರಿಬ್ಬರೂ ಒಟ್ಟಿಗೇ ನಟಿಸಿದರು.

ಇತ್ತೀಚೆಗೆ ಅದ್ವಿತಿ ಅಭಿನಯದ 'ಫ್ಯಾನ್' ಸಿನಿಮಾ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಿದೆ. 'ಧೀರ ಸಾಮ್ರಾಟ್' ಎಂಬ ಸಿನಿಮಾದ ಒಂದು ಹಾಡಿನ ಚಿತ್ರೀಕರಣ ಬಾಕಿ ಇದೆ. 'ಐರಾವನ್' ಎಂಬ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. 'ಡಾ. ಅಭಿ 007' ಹೆಸರಿನ ಇನ್ನೊಂದು ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾವನ್ನೂ ಒಪ್ಪಿಕೊಂಡಿದ್ದಾರೆ. ಧರ್ಮ ಕೀರ್ತಿರಾಜ್ ಅವರ ಜೊತೆಗೆ ರೆಟ್ರೊ ಸ್ಟೈಲ್‌ನ 'ಕ್ಯಾಡಬರೀಸ್' ಸಿನಿಮಾದಲ್ಲಿಯೂ ನಟಿಸುತ್ತಿದ್ದಾರೆ. ಇತ್ತೀಚೆಗೆ ಡಾರ್ಲಿಂಗ್ ಕೃಷ್ಣ ಅವರ ಜೊತೆಗೆ 'ಶುಗರ್ ಫ್ಯಾಕ್ಟರಿ' ಸಿನಿಮಾದಲ್ಲಿ ನಟಿಸುತ್ತಿರುವ ಸುದ್ದಿಯೂ ಹೊರಗೆ ಬಿದ್ದಿದೆ.

ಹೀಗೆ ಅವಕಾಶಗಳನ್ನು ಎರಡೂ ಕೈಗಳಲ್ಲಿ ಬಾಚಿಕೊಳ್ಳುತ್ತಿರುವ ಅದ್ವಿತಿ ನಟನೆಯ ವಿಷಯದಲ್ಲಿ ವೃತ್ತಿಪರತೆಯನ್ನು ಎತ್ತಿಹಿಡಿಯುವವರು. 'ನಾನು ಯಾವುದೇ ಪಾತ್ರ ಒಪ್ಪಿಕೊಂಡರೆ ಸಾಧ್ಯವಾದಷ್ಟೂ ವೃತ್ತಿಪರವಾಗಿ ಆ ಕೆಲಸ ಮುಗಿಸಲು ಬಯಸುತ್ತೇನೆ. ನನ್ನ ಪಾತ್ರದ ಪೂರ್ವಾಪರವಷ್ಟೇ ಅಲ್ಲ, ಇಡೀ ಸಿನಿಮಾದ ಕಥೆ, ಅದರಲ್ಲಿ ನನ್ನ ಪಾತ್ರ ವಹಿಸುವ ಕೆಲಸ ಎಲ್ಲವನ್ನೂ ಕೂಲಂಕಶವಾಗಿ ಪರಿಶೀಲಿಸುತ್ತೇನೆ. ನಂತರ ನನ್ನ ನಿಜಜೀವನದ ಮ್ಯಾನರಿಸಮ್ ಅನ್ನೇ ಆ ಪಾತ್ರಗಳಿಗೆ ಹೊಂದಿಸಲು ಯತ್ನಿಸುತ್ತೇನೆ. ಹಾಗಾಗಿ ನನ್ನ ನಟನೆ ಹೆಚ್ಚು ನೈಜವಾಗಿರುತ್ತದೆ' ಎನ್ನುತ್ತಾರೆ ಅದ್ವಿತಿ.

'ನಾನು ಈ ಕ್ಷೇತ್ರಕ್ಕೆ ಬಂದಿದ್ದೇ ಆಕಸ್ಮಿಕವಾಗಿ. ಕಳೆದ ಏಳು ವರ್ಷಗಳಲ್ಲಿ ನಾನು ಇಲ್ಲಿ ಗಳಿಸಿದ ಅನುಭವದಿಂದ ಕಲಿತ ಪಾಠವೇನೆಂದರೆ, ನಿರೀಕ್ಷೆ ಇಟ್ಟುಕೊಳ್ಳಬಾರದು ಎನ್ನುವುದು. ನನಗೆ ಬಂದ ಕೆಲಸವನ್ನು ನೂರಕ್ಕೆ ಇನ್ನೂರು ಪರ್ಸೆಂಟ್ ಶ್ರಮ ಹಾಕಿ ಮಾಡುತ್ತೇನೆ. ಅದರ ಯಶಸ್ಸು ಸೋಲು ಪ್ರೇಕ್ಷಕರಿಗೆ ಬಿಟ್ಟಿದ್ದು' ಎನ್ನುವುದು ಅದ್ವಿತಿ ನಿಲುವು.

'ಪದ್ಮಾವತ್'ನಂಥ ಐತಿಹಾಸಿಕ ಸಿನಿಮಾದಲ್ಲಿ ನಟಿಸಬೇಕು ಎಂಬುದು ಅದ್ವಿತಿ ಅವರ ಆಸೆಗಳಲ್ಲೊಂದು. ನಟನೆಯ ಜೊತೆಗೆ ನಿರ್ದೇಶನದಲ್ಲಿಯೂ ಇವರಿಗೆ ಆಸಕ್ತಿಯಿದೆ.

ಸಿನಿಮಾಕ್ಕೆ ಬಂದ ಮೇಲೆ ಡಾನ್ಸ್ ಮತ್ತು ಕ್ರೀಡೆಗಳ ಕಥೆ ಏನಾಯ್ತು ಎಂದು ಕೇಳಿದರೆ ಒಂದು ಉದಾಹರಣೆಯ ಮೂಲಕವೇ ಉತ್ತರ ಕೊಡುತ್ತಾರೆ ಅದ್ವಿತಿ.

'ನಾನು ಬೆಂಗಳೂರಿಗೆ ಬಂದ ಹೊಸತರಲ್ಲಿ ಮಂಗಳೂರು ಕನ್ನಡವನ್ನೇ ಮಾತಾಡುತ್ತಿದ್ದೆ. ಕ್ರಮೇಣ ಬೆಂಗಳೂರು ಕನ್ನಡ ಕಲಿತೆ. ಆದರೆ ಈಗಲೂ ನನ್ನ ಒಳಗೆ ಇರುವುದು ಮಂಗಳೂರು ಕನ್ನಡವೇ. ಅದು ನನ್ನ ಬದುಕಿನಲ್ಲೇ ಬೆರೆತುಹೋಗಿದೆ. ಹಾಗೆಯೇ ನೃತ್ಯ ಮತ್ತು ಕ್ರೀಡೆ ಕೂಡ. ಒಮ್ಮೆ ಕಲಿತರೆ ಅದು ಯಾವತ್ತೂ ಮರೆತು ಹೋಗುವುದಿಲ್ಲ. ಆ ಎರಡರ ಉಪಯೋಗವನ್ನು ನಾನು ಸಿನಿಮಾದಲ್ಲಿ ಬಳಸಿಕೊಳ್ಳುತ್ತಿದ್ದೇನೆ' ಎನ್ನುವ ಅದ್ವಿತಿಗೆ ನಟನೆಯ ಟ್ರ್ಯಾಕಿನಲ್ಲಿ ಇನ್ನಷ್ಟು ದೂರ ಓಡುವ ಹಂಬಲ, ಶಕ್ತಿ ಎರಡೂ ಇದೆ. ■